

ಜಗತ್ತಿನಾದ್ಯಂತ ಕಾಸ್ಮೆಟಿಕ್ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಳ್ಳುವ ಮಂದಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಸುಮಾರು ನೂರು ಪಟ್ಟು ಜಾಸ್ತಿಯಾಗಿದ್ದಾರೆ. ಕಾಸ್ಮೆಟಿಕ್ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಳ್ಳುವವರಲ್ಲಿ ಹೆಚ್ಚಿನಂಶ ಹೆಂಗಸರು. ಗಂಡಸರಿಗಿಂತ ಎಂಟುಪಟ್ಟು ಹೆಚ್ಚಿನ ಹೆಂಗಸರು ಕಾಸ್ಮೆಟಿಕ್ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡಿರುತ್ತಾರೆ. ಚರ್ಮದ ಸುಕ್ಕು ತೆಗೆಯಲು ಬೋಟೆಕ್ಸ್, ಕೂದಲನ್ನು ಶಾಶ್ವತವಾಗಿ ತೆಗೆಯಲು ಲೇಸರ್ – ಇಂತಹ ಸರಳ ಶಸ್ತ್ರಚಿಕಿತ್ಸೆಗಳಿಂದ ಹಿಡಿದು, ಸ್ತನಗಳ ಹಿಗ್ಗಿಸುವಿಕೆ, ಕುಗ್ಗಿಸುವಿಕೆ, ತುಟಿ, ಮೂಗುಗಳ ರಿಪೇರಿ ಸೇರಿದಂತೆ ವಿವಿಧ ಶಸ್ತ್ರಚಿಕಿತ್ಸೆಗಳ ತನಕ ತರಹೇವಾರಿ ರಿಪೇರಿಕ್ರಿಯೆಗಳು ಇಂದು ಜನಸಾಮಾನ್ಯರಿಗೂ ಲಭ್ಯವಿವೆ.

ಕಾಸ್ಮೆಟಿಕ್ ಸರ್ಜರಿಗಳು ಜನಪ್ರಿಯವಾದಂತೆ ಸೌಂದರ್ಯದ ವಿವರಣೆಯೂ ಬದಲಾಯಿತು. ಕವಿಕಲ್ಪನೆಯಾದ ತುಂಬುತುಟಿ, ನೀಳನಾಸಿಕ, ಕಮಾನಿನಂತಹ ಹುಬ್ಬು, ಗಾಜಿನ ಕೊಳದಂತಹ ಕಣ್ಣುಗಳು, ಇಂತಹ ಲಕ್ಷಣಗಳಿದ್ದರೆ ಮಾತ್ರ ಸುಂದರಿಯರು ಎಂಬ ಸೌಂದರ್ಯದ ಏಕರೂಪಿ ವಿವರಣೆ ಜನಪ್ರಿಯವಾಯಿತು. ಸೌಂದರ್ಯ ದೈವದತ್ತವಾಗಿರದಿದ್ದಲ್ಲಿ ಅದನ್ನು ನಮಗೆ ಮರುಸೃಷ್ಟಿಸಿಕೊಡಲು ಪ್ಲಾಸ್ಟಿಕ್ ಸರ್ಜನುಗಳಿದ್ದಾರೆ, ಹಾಗಾಗಿ ನಾವು ದುಡ್ಡುಕೊಟ್ಟು ಸೌಂದರ್ಯವನ್ನು ಕೊಂಡುಕೊಂಡರೆ ತಪ್ಪೇನು ಎಂಬ ಭಾವನೆ ಕೂಡ ಪ್ರಶ್ನಾತೀತವಾಯಿತು.

ಕಾಸ್ಮೆಟಿಕ್ ಸರ್ಜರಿಗಳನ್ನು ಮಾಡಿಸಿಕೊಳ್ಳುವುದರಿಂದ ಆತ್ಮವಿಶ್ವಾಸ ಜಾಸ್ತಿಯಾಗುತ್ತದೆ, ಆದ್ದರಿಂದ ಇದು ಕೂಡ ಮಹಿಳಾ ಸಬಲೀಕರಣದ ಸಾಧನ ಎಂಬ ವಾದ ಪ್ರಬಲವಾಯಿತು. ಕಾಸ್ಮೆಟಿಕ್ ಸರ್ಜರಿಯನ್ನು ಇನ್ನೂ ಹೆಚ್ಚುಹೆಚ್ಚು ಜನ ಮಾಡಿಸಿಕೊಂಡಲ್ಲಿ ಎಲ್ಲರ ರೂಪ, ಮೈಮಾಟ ಎಲ್ಲವೂ ಒಂದೇ ಬಗೆಯಾಗಿ ರೂಪವಿರೂಪಗಳಿಂದ ನಿರ್ಮಿತವಾಗುವ ತಾರತಮ್ಯವನ್ನು ತೊಡೆದುಹಾಕಬಹುದು ಎಂಬ ವಾದಕ್ಕೂ ಬಹಳ ಬೆಂಬಲ ಸಿಕ್ಕಿತು. ಹಾಗಾಗಿ ಎರಡನೇ ಮಹಾಯುದ್ಧದಲ್ಲಿ ಸೈನಿಕರಿಗೆ ಮಾಡುತ್ತಿದ್ದ ಮುಖ, ಮೂಗು, ತುಟಿ, ದವಡೆ ರಿಪೇರಿಯಿಂದ ಹಿಡಿದು ಚರ್ಮ ಕಸಿ ಮುಂತಾದ ಶಸ್ತ್ರಚಿಕಿತ್ಸೆಗಳು ಸೌಂದರ್ಯವರ್ಧಕ ಅಥವಾ ಸೌಂದರ್ಯಪಾಲಕ ಶಸ್ತ್ರಚಿಕಿತ್ಸೆಗಳಾಗಿ ಬದಲಾದವು.

(ಪ್ಲಾಸ್ಟಿಕ್ ಸರ್ಜರಿಯ ಬಗ್ಗೆ ಬರೆಯಬೇಕಾದರೆ ಅದರ ಗ್ರಾಹಕರನ್ನು ಒಂದು ಲಿಂಗಕ್ಕೆ ಸಮೀಕರಿಸದೆ ಬರೆಯಲಾಗದು. ಇದರ ಹಿಂದಿನ ರಾಜಕೀಯ ಕೂಡ ಅಷ್ಟೇ ಕ್ರೂರವಾದದ್ದು. ಪುರುಷಪ್ರಧಾನವಾದ ನಮ್ಮ ಸಮಾಜದಲ್ಲಿ ಹೆಣ್ಣನ್ನು ಒಂದು ಸರಕು ಎಂದು ಪರಿಗಣಿಸಿರುವುದು ಒಪ್ಪಲಾರದ, ಒಪ್ಪಬಾರದ, ಆದರೆ ಅನಿವಾರ್ಯವಾದ ಕ್ರೂರ ಸತ್ಯ. ಆದರೆ ಎಲ್ಲಿಯವರೆಗೆ ಚಿಯರ್ ಲೀಡರ್, ಎಂಟರ್ಟೈನ್‌ಮೆಂಟ್ ವೀಕ್ಲಿ, ವೋಗ್ ಸಂಸ್ಕೃತಿಗಳಿರುತ್ತವೋ ಅಲ್ಲಿಯವರೆಗೆ ಈ ಕ್ರೌರ್ಯ ಸಬಲೀಕರಣ, ಸ್ವಾತಂತ್ರ್ಯ, ಉದಾರವಾದ ಇತರೆ ಹೆಸರುಗಳಲ್ಲಿ ಜೀವಂತವಾಗಿರುತ್ತದೆ. ಪುರುಷರು ಕಾಸ್ಮೆಟಿಕ್ ಸರ್ಜರಿ ಮಾಡಿಸಿಕೊಳ್ಳುವುದಿಲ್ಲವೇ

